# ಪದ್ಯ ಪೂರಕ

## 3. ಆಹುತಿ – – ಕೊಡಗಿನ ಗೌರಮ್ಮ

### ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

**1. ರೈಲಿನಲ್ಲಿ ಸಿಕ್ಕಿದ ಮುದುಕನ ಉದ್ಯೋಗವೇನು?**

**ಉತ್ತರ** : ರೈಲಿನಲ್ಲಿ ಸಿಕ್ಕಿದ ಮುದುಕನು ಒಬ್ಬ ರತ್ನದ ವ್ಯಾಪಾರಿ ಆಗಿದ್ದನು.

**2. ಯುವಕನು ರೈಲಿನಲ್ಲಿ ಸಿಕ್ಕಿದ ಮುದುಕನ ಮನೆಗೆ ಏಕೆ ಬಂದನು?**

**ಉತ್ತರ** : ಯುವಕನು ರೈಲಿನಲ್ಲಿ ಸಿಕ್ಕಿದ ಮುದುಕನ ಮಗಳು ಮತ್ತು ಸೊಸೆಗೆ ಪಾಠ ಹೇಳಿಕೊಡುವ ಕೆಲಸಕ್ಕಾಗಿ ಮುದುಕನ ಮನೆಗೆ ಬಂದನು.

**3. ಮುದುಕನ ಮಗಳು ಮತ್ತು ಸೊಸೆಯ ಹೆಸರೇನು?**

**ಉತ್ತರ** : ಮುದುಕನ ಮಗಳ ಹೆಸರು ಸೀತೆ, ಸೊಸೆಯ ಹೆಸರು ಶಾಂತಿ.

**4. ವರದಕ್ಷಿಣೆಯ ಪಿಶಾಚಿ ಯಾರನ್ನು ಬಲಿ ತೆಗೆದುಕೊಂಡಿದೆ?**

**ಉತ್ತರ** : ವರದಕ್ಷಿಣೆಯ ಪಿಶಾಚಿ ಅನೇಕ ಸುಕುಮಾರಿ ಹೆಣ್ಣುಮಕ್ಕಳನ್ನು ಬಲಿ ತೆಗೆದುಕೊಂಡಿದೆ.

**5. ಯುವಕನು ಬಡವರ ಹುಡುಗಿಯನ್ನು ಮದುವೆಯಾಗದಿರಲು ಕಾರಣಗಳೇನು?**

**ಉತ್ತರ** : ಯುವಕನಿಗೆ ಲಂಡನ್ನಿನಲ್ಲಿ ಲಾ ಕಲಿತು, ಬ್ಯಾರಿಸ್ಟರ್ ಆಗಬೇಕೆಂಬ ಬಲವಾದ ಇಚ್ಛೆಯಿತ್ತು. ಆದ್ದರಿಂದ ಅವನು ಬಡವರ ಮನೆಯ ಹುಡುಗಿಯನ್ನು ಮದುವೆ ಆಗಲಿಲ್ಲ.

6. ಪತ್ರಿಕೆಯನ್ನು ತೋರಿಸಿ ವಿಜಯಳು ಅಣ್ಣನಿಗೆ ಏನು ಹೇಳಿದಳು?

1. **ಉತ್ತರ** : ಪತ್ರಿಕೆಯನ್ನು ತೋರಿಸಿ ವಿಜಯಳು ಅಣ್ಣನಿಗೆ “ **ನೋಡುತ್ತಿದ್ದುದು ನೀನು ಕೊಂದ ಹುಡುಗಿಯನ್ನು**” ಎಂದು ಹೇಳಿದಳು.